

ಎದ್ದು ಕಾಣಿಸುತ್ತದೆ. ಉದ್ದಕ್ಕೂ ಒಂದು ಇನ್ನೊಂದನ್ನು ಗಟ್ಟಿಗೊಳಿಸುತ್ತಾ ಹೋಗಿರುವ ಈ ಅಂಶವು ಬರವಣಿಗೆ ಮತ್ತು ಸಾರ್ವಜನಿಕ ಬದುಕು ಹಾಗೂ ಹೋರಾಟವನ್ನು ಕುರಿತ ನಮ್ಮ ಗ್ರಹಿಕೆಗಳಿಗೇ ಒಂದು ಸ್ಪಷ್ಟತೆಯನ್ನು ಕೊಡುತ್ತದೆ. ನಡೆ ಮತ್ತು ನುಡಿಗಳ ಅವಿನಾ ಸಂಬಂಧವು ಒಬ್ಬ ವ್ಯಕ್ತಿಯ ಬದುಕು ಮತ್ತು ಬರಹಗಳಿಗೆ ತಂದುಕೊಡುವ ಶಕ್ತಿ ಎಷ್ಟು ಪ್ರಭಾವಶಾಲಿಯಾದುದು ಎನ್ನುವುದಕ್ಕೆ ಬಾನು ಮುಷ್ತಾಕ್, ಸಮಕಾಲೀನ ಭಾರತೀಯ ಬರವಣಿಗೆಯಲ್ಲಿಯೇ ಒಂದು ಅತ್ಯುತ್ತಮ ಉದಾಹರಣೆ.

ಎಲ್ಲ ಮಧ್ಯಮವರ್ಗದ ಹುಡುಗಿಯರಂತೆಯೇ ತನ್ನಿಚ್ಛೆಯ ಬದುಕನ್ನು ಕಟ್ಟಿಕೊಳ್ಳುವ ಹಂಬಲದಿಂದ ಆರಂಭವಾದ ಬಾನು ಅವರ ಬದುಕು ಸ್ಥಾಪಿತ ಗಂಡಾಳಿಕೆಯ ಆಕ್ರಮಣಕ್ಕೆ ಆರಂಭದಲ್ಲಿ ತತ್ತರಿಸಿದ್ದನ್ನು ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ. ತುಸು ಕುಗ್ಗಿದ ಆತ್ಮಬಲವನ್ನು ಅವರ ಪತಿ ಮುಷ್ತಾಕ್ ಎಚ್ಚರಿಸಿದರು. ಸಂದರ್ಶನವೊಂದರಲ್ಲಿ 'ಹಿ ಕುಡ್ ಸೆನ್ಸ್ ಇಟ್' ಎನ್ನುತ್ತಾರೆ ಬಾನು. ಇದನ್ನೇ ನಾವು ಗಂಡಿನ ಬದಲಾಗಬೇಕಾದ ಸಂವೇದನೆ ಎಂದು ಅನಾದಿ ಕಾಲದಿಂದಲೂ ಕನವರಿಸುತ್ತಿರುವುದು. ತನ್ನ ಮನೆಯಲ್ಲೇ ಹೆಂಡತಿ ಎದುರಿಸುತ್ತಿದ್ದ ಬಿಕ್ಕಟ್ಟುಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ಮುಷ್ತಾಕ್ ಅದನ್ನು ಎದುರಿಸಲು, ಮೀರಿಕೊಳ್ಳಲು ಬಾನು ಅವರಿಗೆ ನೀಡಿದ ನೈತಿಕ ಬೆಂಬಲ ಲಕ್ಷಾಂತರ ಹೆಣ್ಣುಮಕ್ಕಳಿಗೆ ಈಗಲೂ ಮರೀಚಿಕೆ ಎನ್ನುವುದನ್ನು ನೆನೆದರೆ ಮುಷ್ತಾಕ್ ಅವರ ಬಗೆಗಿನ ಗೌರವ ಇಮ್ಮಡಿಯಾಗುತ್ತದೆ. ಕೊನೆಗೂ ಗಂಡು ಮತ್ತು ಹೆಣ್ಣು ಇಬ್ಬರೂ ಒಟ್ಟಾಗಿ ನಡೆಯಬೇಕಾದ ದಾರಿ ಎಂದು ಎಲ್ಲ ಸಂವೇದನಾಶೀಲರು ಹೇಳುತ್ತಿರುವುದು ಇದನ್ನೇ. ಅಲ್ಲಿಂದಾಚೆಗಿನದು ನೀಲಮ್ಮ ಹೇಳುವಂತೆ 'ನಾನೇ ಪ್ರಮಾಣು'ವಿನ ಪ್ರಯಾಣ. ಹೆದರಿಸುತ್ತಿದ್ದ ಲೋಕವನ್ನು ಎದುರಿಸಿದ ಪ್ರಯಾಣ. ಬದುಕಿನುದ್ದಕ್ಕೂ ಬಾನು – ಬಹಿರಂಗದ ವಕೀಲಿಕೆಯ ವೃತ್ತಿ, ಸಾರ್ವಜನಿಕ ಹೋರಾಟ ಮತ್ತು ಅಂತರಂಗದ ಅಭಿವ್ಯಕ್ತಿಯಾದ ಬರವಣಿಗೆ, ಈ ಎರಡನ್ನೂ ಬೆಸೆಯುವ ಕಾರ್ಯದಲ್ಲೇ ನಿರತರಾದರು. ಅದರ ಸೋಲು, ಗೆಲುವು, ಬಿಕ್ಕಟ್ಟುಗಳು ಈ ಎಲ್ಲವನ್ನೂ ಒಂದೇ ಪ್ರಯಾಣದ ಭಾಗ ಎಂದೇ ತಿಳಿದರು.

ಬಾನು ಅವರ ಮೊದಲ ಕಥಾಸಂಕಲನದ ಶೀರ್ಷಿಕೆ